**ಸಾಕ್ಷಿಗೆ ದಿನಾಂಕಃ19-03-2026 ರಂದು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**:: ಮುಂದುವರೆದ ಪಾಟೀ ಸವಾಲು :: ಪ್ರತಿವಾದಿಗಳ ಪರ ಶ್ರೀ. GVK ವಕೀಲರಿಂದ ::**

ದಾವಾ ಶೆಡ್ಯೂಲ್ ಸ್ವತ್ತಿನ ಖಾತೆ ವಜಾ ಕೋರಿ ಎಸಿ ನ್ಯಾಯಾಲಯಕ್ಕೆ ನಾನೇ ನಿಪಿ7 ರಂತೆ ಅರ್ಜಿ ಸಲ್ಲಿಸಿರುತ್ತೇನೆ ಎಂದರೆ ಸರಿ. ಸದರಿ ಪ್ರಕರಣವನ್ನು ಸಿವಿಲ್ ನ್ಯಾಯಾಲಯದಲ್ಲಿ ಪರಿಹಾರ ಕೋರುವಂತೆ ವಜಾ ಮಾಡಿರುತ್ತಾರೆ ಎಂದರೆ ಸರಿ. ದಾವಾ ಐಟಂ 2 ಜಾಗವು ನನ್ನ ತಂದೆಯ ಹೆಸರಿನಲ್ಲಿ ಇತ್ತು ಎಂದರೆ ಸರಿ. ಸದರಿ ಆಸ್ತಿಯು ನನ್ನ ತಂದೆಯಿಂದ ತಾಯಿಗೆ ಪೌತಿ ಆಧಾರದಲ್ಲಿ ಬಂದಿರುತ್ತದೆ ಎಂದರೆ ಸರಿ. ದಾವಾ ಐಟಂ 2 ಜಾಗವು ನಿಪಿ10 ರಂತೆ ಪ್ರತಿವಾದಿಗಳ ಜಂಟಿ ಖಾತೆಯಲ್ಲಿ ಇರುತ್ತದೆ ಎಂದರೆ ಸರಿ. ದಾವಾ ಐಟಂ 2 ರ ಸರ್ವೇ ನಂಬರ್ ನಲ್ಲಿ ನನಗೆ 3 ಎಕರೆ 38 ಗುಂಟೆ ಜಾಗ ಇರುತ್ತದೆ ಎಂದರೆ ಸರಿ. ನಿಪಿ11 ನನ್ನ ತಂದೆಯ ಹೆಸರಿಗೆ ಖಾತೆ ಆಗಿರುವ ಬಗ್ಗೆ ಇರುವ ಎಂ ಆರ್ ಎಂದರೆ ಸರಿ. ನಿಪಿ12 ನನ್ನ ತಾಯಿಯ ಹೆಸರಿನಿಂದ ಪ್ರತಿವಾದಿಗಳ ಹೆಸರಿಗೆ ಖಾತೆ ಆಗಿರುವ ಬಗ್ಗೆ ಇರುವ ಎಂ ಆರ್ ಎಂದರೆ ಸರಿ.

ದಾವಾ ಐಟಂ 1 ನನ್ನ ತಂದೆಯ ಸ್ವಯಾರ್ಜಿತ ಆಸ್ತಿ ಆಗಿರುತ್ತದೆ ಎಂದರೆ ಸರಿ. ನಿಪಿ13 ಸದರಿ ಆಸ್ತಿಯ ಪಹಣಿ ಆಗಿರುತ್ತದೆ ಎಂದರೆ ಸರಿ. 1976 ರಲ್ಲಿ ನಾನು ಕುಟುಂಬದಲ್ಲಿ ಆದ ವಿಭಾಗದ ನಂತರದಲ್ಲಿ ಆಸ್ತಿ ಪಡೆದು ಕುಟುಂಬದಿಂದ ಹೊರಗೆ ಹೋಗಿರುತ್ತೇನೆ ಎಂದರೆ ಸರಿ. ದಾವಾ ಐಟಂ 1 ನ್ನು ನನ್ನ ತಂದೆ 1978 ರಲ್ಲಿ ಖರೀದಿ ಮಾಡಿದ್ದು ಅದು ಅವರ ಸ್ವಯಾರ್ಜಿತ ಆಸ್ತಿ ಆಗಿರುತ್ತದೆ ಎಂದರೆ ಸರಿ. ನಿಪಿ14 ರಲ್ಲಿ ನನ್ನ ತಾಯಿಗೆ ಪೌತಿ ಆಧಾರದಲ್ಲಿ ಖಾತೆ ಆಗಿರುವುದು ಕಂಡು ಬರುತ್ತದೆ ಎಂದರೆ ಸರಿ. ನಿಪಿ15 ರಲ್ಲಿ ನನ್ನ ತಾಯಿಯಿಂದ ಪ್ರತಿವಾದಿಗಳ ಹೆಸರಿಗೆ ಖಾತೆ ಬದಲಾವಣೆ ಆಗಿರುವುದು ಕಂಡು ಬರುತ್ತದೆ ಎಂದರೆ ಸರಿ. ನಿಪಿ16 ನನ್ನ ತಾಯಿಯಿಂದ ಪ್ರತಿವಾದಿಗಳ ಹೆಸರಿಗೆ ಖಾತೆ ಆಗಿರುವ ಬಗ್ಗೆ ಇರುವ ಎಂ ಆರ್ ಆಗಿರುತ್ತದೆ ಎಂದರೆ ಸರಿ. ನಿಪಿ 17 ಮುನಿಸ್ವಾಮಿ ರವರಿಂದ ನನ್ನ ತಂದೆಯ ಹೆಸರಿಗೆ ಖರೀದಿಗೆ ಸಂಬಂಧಪಟ್ಟಂತೆ ಆಗಿರುವ ಎಂ ಆರ್ ಆಗಿರುತ್ತದೆ ಎಂದರೆ ಸರಿ. ನಿಪಿ18 ನನ್ನ ತಂದೆಯವರು ಮರಣ ನಂತರ ಪೌತಿ ಖಾತೆ ಮೇಲೆ ನನ್ನ ತಾಯಿಯ ಹೆಸರಿಗೆ ಆಗಿರುವ ಎಂ ಆರ್ ಆಗಿರುತ್ತದೆ ಎಂದರೆ ಸರಿ.

ದಾವಾ ಶೆಡ್ಯೂಲ್ ಸ್ವತ್ತುಗಳ ಮೇಲೆ ಮತ್ತೊಂದು ವಿಭಾಗ ದಾವೆ ಇರುತ್ತದೆ ಎಂದರೆ ಸರಿ. ಸದರಿ ದಾವೆಯ ಸಂಖ್ಯೆ ಅಸಲು ದಾವಾ 179/2019 ಆಗಿರುತ್ತದೆ ಎಂದರೆ ಸರಿ. ಸದರಿ ದಾವೆಯಲ್ಲಿ ಇಲ್ಲಿಯವರೆಗೂ ಯಾವುದೇ ತಕರಾರು ಸಲ್ಲಿಸಿರುವುದಿಲ್ಲ ಎಂದರೆ ಸರಿ. ದಾವಾ ಐಟಂ 1 ಮತ್ತು 2 ಮೂಡಲಗಿರಿಯಪ್ಪ ರವರ ಸ್ವಯಾರ್ಜಿತ ಸ್ವತ್ತಾಗಿದ್ದು ಅವರು ಮೃತರಾದ ನಂತರದಲ್ಲಿ ಅದರ ಖಾತೆಯು ನನ್ನ ತಾಯಿಯ ಹೆಸರಿಗೆ ವರ್ಗಾವಣೆಯಾಗಿದ್ದು ಅವರು ಸ್ವ ಇಚ್ಚೆಯಿಂದ ಪ್ರತಿವಾದಿಗಳ ಹೆಸರಿಗೆ ನೋಂದಾಯಿತ ವಿಲ್ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಅಣ್ಣ ಸಿದ್ದಪ್ಪ ರವರಿಗೆ ನನ್ನ ತಂದೆ ಹಿಂದೆಯೇ ಸಾಕಷ್ಟು ಆಸ್ತಿ ನೀಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಆಸ್ತಿಗೆ ಸಂಬಂಧಪಟ್ಟಂತೆ ನಾನು ನನ್ನ ಅಣ್ಣ ಸಿದ್ದಪ್ಪ ರವರಿಗೆ ತೊಂದರೆ ನೀಡಿದ ಕಾರಣ ಅವರು ನನ್ನ ವಿರುದ್ದ ಪೊಲೀಸ್ ದೂರು ನೀಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ತಕರಾರು ಆದ ನಂತರ ನನ್ನ ಅಣ್ಣನ ಆಸ್ತಿಯ ಆದಾಯವನ್ನು ನಾನೇ ಪಡೆಯುತ್ತಿದ್ದೇನೆಂದರೆ ಸರಿಯಲ್ಲ. ಪ್ರಸ್ತುತದಲ್ಲಿ ನಾನು ಸುಮಾರು ಒಟ್ಟು ಐದು ಮುಕ್ಕಾಲು ಎಕರೆ ಜಾಗದ ಸ್ವಾಧೀನದಲ್ಲಿ ಇರುತ್ತೇನೆ ಎಂದರೆ ಸರಿಯಲ್ಲ. ನಾನು ನನ್ನ ತಂದೆ ತಾಯಿಯ ಜೀವಿತಾ ಅವಧಿಯಲ್ಲಿ ಅವರನ್ನು ನೋಡಿಕೊಳ್ಳದಿದ್ದರೂ ನನ್ನ ಸಹೋದರಿಯರ ಬಗ್ಗೆ ಕಾಳಜಿ ವಹಿಸದಿದ್ದರೂ ಕೇವಲ ಆಸ್ತಿಯ ಮೇಲಿನ ಆಸೆಯಿಂದ ಸುಳ್ಳು ಕತೆ ಸೃಷ್ಟಿಸಿ ಸುಳ್ಳು ದಾವೆ ಹೂಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಸಿದ್ದಪ್ಪ ರವರಿಗೆ ಅನಾವಶ್ಯಕವಾಗಿ ತೊಂದರೆ ನೀಡಿದ ಕಾರಣ ಅವರು ಅಸಲು ದಾವಾ 179/2019 ದಾವೆ ಹೂಡಿರುತ್ತಾರೆ ಎಂದರೆ ಸರಿಯಲ್ಲ. ನನಗೆ ಎಲ್ಲಾ ವಿಚಾರ ತಿಳಿದಿದ್ದರೂ ಸಹ ಅಕ್ರಮ ಲಾಭ ಪಡೆಯುವ ದುರುದ್ದೇಶದಿಂದ ಸುಳ್ಳು ಪ್ರಮಾಣಪತ್ರವನ್ನು ಸಲ್ಲಿಸಿ ಅದಕ್ಕೆ ಪೂರಕವಾಗಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**:: ಮರು ವಿಚಾರಣೆ ಇಲ್ಲ ::**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು).

ಓ ಹೇ ಕೇ ಸ ಇ ಎ ಒ

sd/-

ಪ್ರಧಾನ ಸಿ.ಜೆ ಮತ್ತು ಹೆ. ಜೆ.ಎಂ.ಎಫ್.ಸಿ

ತರೀಕೆರೆ.

ಸಾಕ್ಷಿಯ ಸಹಿ: